**ದಿನಾಂಕ 09.09.2025 ರಂದು ಪಿಡಬ್ಲ್ಯೂ-1 ರವರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ- ಸ.ಸ.ಅ ರವರಿಂದಃ-**

ದಿನಾಂಕ 13.04.2022 ರಂದು ಪೋಲಿಸರು ನನ್ನ ಅಂಗಡಿಗೆ ಪಂಚನಾಮೆ ಮಾಡಲು ಬಂದಿದ್ದರು. ಆ ದಿನ ನನ್ನ ಅಂಗಡಿಯಲ್ಲಿ ಬೆಳಿಗ್ಗೆ 11.00 ಗಂಟೆಯಿಂದ ಮಧ್ಯಾಹ್ನ 1.00 ಗಂಟೆವರೆಗೆ ಪೋಲಿಸರು ಚಾಸಾ-2 ಮತ್ತು 3 ರವರ ಸಮಕ್ಷಮ ಪಂಚನಾಮೆ ಮಾಡಿರುತ್ತಾರೆ. ಈಗ ಸಾಕ್ಷಿಗೆ ಸ.ಸ.ಅ ರವರು ನಿಪಿ-2 ರೊಂದಿಗೆ ಲಗತ್ತು ಇರುವ ಕೈನಕಾಶೆಯನ್ನು ತೋರಿಸಿದ್ದು, ಸಾಕ್ಷಿಯು ಅದರ ಮೇಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುವುದರಿಂದ, ಸದರಿ ಸಹಿಯನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು.

ಈಗ ಸಾಕ್ಷಿಗೆ ಸ.ಸ.ಅ ರವರು ಫಾರ್ಮ್-ಸಿ ನಮೂನೆಯ ಪ್ರಮಾಣ ಪತ್ರದ ಅಟೆಸ್ಟೆಡ್ ಪ್ರತಿಯನ್ನು ತೋರಿಸಿದ್ದು, ಸಾಕ್ಷಿಯು ಅದು ತನ್ನ ಅಂಗಡಿಗೆ ಸಂಬಂಧಿಸಿದ ದಾಖಲೆ ಎಂದು

ನುಡಿಯುತ್ತಾರೆ. ಆದ್ದರಿಂದ ಸದರಿ ದಾಖಲೆಯನ್ನು ನಿಪಿ-18 ಎಂದು ಗುರುತಿಸಲಾಯಿತು. ನಾನು ನ್ಯಾಯಾಲಯದ ಮುಂದಿರುವ 2ನೇ ಆರೋಪಿಯನ್ನು ಗುರುತಿಸುತ್ತೇನೆ. ಇಂದು ನ್ಯಾಯಾಲಯದ ಮುಂದೆ ಗೈರು ಹಾಜರು ಇರುವ 1ನೇ ಆರೋಪಿಯನ್ನು ನಾನು ನೋಡಿದರೆ ಗುರುತಿಸುತ್ತೇನೆ.

**(**ಈ ಹಂತದಲ್ಲಿ ಸ**.**ಸ**.**ಅ ರವರು ಸಾಕ್ಷಿಯು ಘಟನಾ ದಿನಾಂಕವನ್ನು ತಪ್ಪಾಗಿ ಹೇಳಿದ್ದು**,** ಆ ಕುರಿತು ಮಾತ್ರ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರುತ್ತಾರೆ**.** ಸದರಿ ಸಾಕ್ಷಿಯ ಸಾಕ್ಷ್ಯವನ್ನು ಪರಿಗಣಿಸಿ ಸ**.**ಸ**.**ಅ**.** ರವರಿಗೆ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು**.)**

<u>ಪಾಟೀ ಸವಾಲುಃ**-** ಸ**.**ಸ**.**ಅ**.** ರವರಿಂದಃ**-**</u>

ನನ್ನ ಅಂಗಡಿಯಲ್ಲಿ ದಿನಾಂಕ 02.03.2022 ರಂದು ಕಳ್ಳತನವಾಗಿರುತ್ತದೆ ಎಂದರೆ ಸರಿ.

<u>ಪಾಟೀ ಸವಾಲುಃ **1**ನೇ ಆರೋಪಿ ಪರ ಶ್ರೀ**.**ಎಸ್ ಸಿ ಕೆ ವಕೀಲರಿಂದಃ**-**</u>

ಕಳೆದ 7-8 ವರ್ಷಗಳಿಂದ ನಾನು ಅಮರ ಎಲೆಕ್ಟ್ರಿಕಲ್ಸ್ ಎಂಬ ಹೆಸರಿನ ಅಂಗಡಿಯನ್ನು ಇಟ್ಟುಕೊಂಡಿರುತ್ತೇನೆ. ನನ್ನ ಅಂಗಡಿಯಲ್ಲಿ ಸಿ.ಸಿ. ಟಿವಿ ಕ್ಯಾಮರಾ ಅಳವಡಿಸಲಾಗಿರುತ್ತದೆ ಎಂದರೆ ಸರಿ. ಹಾರ್ಡಡಿಸ್ಕನ್ನು ಪೋಲಿಸರ ಮುಂದೆ ಹಾಜರುಪಡಿಸಿರುತ್ತೇನೆ. ನಮ್ಮ ಅಂಗಡಿಯಲ್ಲಿ ಮಾರಾಟ, ಖರೀದಿ ಮತ್ತು ಸ್ಟಾಕ್ ರಜಿಸ್ಟರಗಳನ್ನು ಇಟ್ಟಿರುತ್ತೇನೆ. ಕಳ್ಳತನವಾಗಿರುವ ವಸ್ತುಗಳ ಕುರಿತು ಸದರಿ ರಜಿಸ್ಟರಗಳಲ್ಲಿ ನಮೂದು ಇರುತ್ತದೆ. ನಾನು ಪೋಲಿಸರ ಮುಂದೆ ಸದರಿ ರಜಿಸ್ಟರಗಳನ್ನು ಹಾಜರುಪಡಿಸಿಲ್ಲ. ಸದರಿ ರಜಿಸ್ಟರಗಳನ್ನು ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ. ಸಾಕ್ಷಿಯು ಮುಂದುವರೆದು ಬಿಲ್ಲುಗಳನ್ನು ಹಾಜರುಪಡಿಸಿರುತ್ತೇನೆ ಎಂದು ಸ್ವತಃ ನುಡಿಯುತ್ತಾರೆ.

ನನ್ನ ಅಂಗಡಿ ಕಳ್ಳತನವಾದ ಏಳು ದಿನಗಳ ನಂತರ ಪೋಲಿಸರಿಗೆ ದೂರು ನೀಡಿರುತ್ತೇನೆ. ನಾನು ನೀಡಿರುವ ಮಾಹಿತಿಯ ಆಧಾರದ ಮೇರೆಗೆ ಪೋಲಿಸರು ನನ್ನ ದೂರನ್ನು ಬರೆದುಕೊಂಡು ಟೈಪ್ ಮಾಡಿರುತ್ತಾರೆ. ದೂರು ನೀಡಲು ವಿಳಂಬವಾದ ಕಾರಣದ ಬಗ್ಗೆ ನಾನು ದೂರಿನಲ್ಲಿ ಬರೆಸಿರುವುದಿಲ್ಲ. ದೂರಿನಲ್ಲಿ ನಮ್ಮ ಮನೆಯವರೊಂದಿಗೆ ವಿಚಾರಿಸಿ ನಂತರ ದೂರು ನೀಡಿರುತ್ತೇ ಎಂದು ಬರೆಸಿರುತ್ತೇನೆ ಎಂದರೆ ಸರಿ. ನನ್ನ ದೂರು ಸ್ವೀಕರಿಸಿದ ನಂತರದಲ್ಲಿ ಪೋಲಿಸರು ನನ್ನ ಪುನರ್ ಹೇಳಿಕೆ ಅಥವಾ ಮರುಹೇಳಿಕೆ ಪಡೆದಿಲ್ಲ.

ನನ್ನ ಅಂಗಡಿಯ ಕಟ್ಟಡದ ಸಂಖ್ಯೆ ನನಗೆ ಗೊತ್ತಿಲ್ಲ. ನಾನು ಸದರಿ ಅಂಗಡಿಯಲ್ಲಿ ಬಾಡಿಗೆ ಆಧಾರದ ಮೇಲೆ ಇರುತ್ತೇನೆ. ನನ್ನ ಅಂಗಡಿ ಪತ್ರಾಸನಿಂದ ಮಾಡಲ್ಪಟ್ಟಿರುತ್ತದೆ. ನನ್ನ ಅಂಗಡಿಯ ಹಿಂಬದಿಯ ಪತ್ರಾಸನ್ನು ಮುರಿದು ಕಳ್ಳತನ ಮಾಡಿರುತ್ತಾರೆ. ಸದರಿ ಮುರಿದ ಪತ್ರಾಸನ್ನು ಪೋಲಿಸರಿಗೆ ತೋರಿಸಿರುತ್ತೇನೆ. ಸದರಿ ಪತ್ರಾಸ್ ಮುರಿದ ಬಗ್ಗೆ ನನ್ನ ದೂರಿನಲ್ಲಿ ಹೇಳಿರುತ್ತೇನೆ.

ಪೋಲಿಸರು ಪಂಚನಾಮೆ ಮಾಡುವ ಸಮಯದಲ್ಲಿ ನನ್ನ ಅಂಗಡಿಯ ಮುರಿದ ಪತ್ರಾಸನ್ನು ಜಪ್ತಿ ಮಾಡಿರುತ್ತಾರೆ. ದೂರಿನಲ್ಲಿ ತೋರಿಸಲಾದ ಎರಡು ಮೋಟರಗಳನ್ನು ಸ್ಟಾಕ್ ರಜಿಸ್ಟರನಲ್ಲಿ ನಮೂದಿಸಲಾಗಿದೆ. ಸದರಿ ಸ್ಟಾಕ್ ರಜಿಸ್ಟರನ್ನು ಪೋಲಿಸರ ಮುಂದೆ ಹಾಜರುಪಡಿಸಿರುತ್ತೇನೆ. ನಾನು ಪೋಲಿಸ್ ಠಾಣೆಯಲ್ಲಿ ನೋಡಿರುವ ಒಬ್ಬ ಆರೋಪಿಯ ಹೆಸರು ನನಗೆ ಗೊತ್ತಿಲ್ಲ. ಇನ್ನೊಬ್ಬ ಆರೋಪಿತನ ಹೆಸರು ನನಗೆ ನೆನಪಿಲ್ಲ. ನಾನು ಪೋಲಿಸರೊಂದಿಗೆ ಶಾಮೀಲಾಗಿ ಆರೋಪಿತರ ವಿರುದ್ಧ ಸುಳ್ಳು ದೂರು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಅಂಗಡಿಯಲ್ಲಿ ಯಾವುದೇ ಮೋಟರಗಳನ್ನು ಕಳ್ಳತನವಾಗಿರುವುದಿಲ್ಲ ಎಂದರೆ ಸರಿಯಲ್ಲ. ದೂರಿನಲ್ಲಿ ತೋರಿಸಲಾಗಿರುವ ಮೋಟರಗಳ ಬಿಲ್ಲುಗಳನ್ನು ನಾನು ಪೋಲಿಸರಿಗೆ ನೀಡಿರುತ್ತೇನೆ. ಸದರಿ ಬಿಲ್ಲುಗಳನ್ನು ನಾನು ಪೋಲಿಸರಿಗೆ ಕೊಟ್ಟಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೋಲಿಸರಿಗೆ ನಾನು ಸಿ.ಸಿ. ಟಿವಿ ಕ್ಯಾಮರಾ ಮೂಲಕ ರೆಕಾರ್ಡ ಆಗಿರುವ ದೃಶ್ಯಾವಳಿಗಳ ಹಾರ್ಡಡಿಸ್ಕ ಪೋಲಿಸರಿಗೆ ಹಸ್ತಾಂತರಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಅಂಗಡಿಯ ಹಿಂಬದಿಯ ಮುರಿದ ಪತ್ರಾಸನ್ನು ಪೋಲಿಸರಿಗೆ ನಾನು ನೀಡಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ಸಂಗತಿಗಳು ಸುಳ್ಳು ಇರುತ್ತವೆ ಎಂದರೆ ಸರಿಯಲ್ಲ.

ಪಾಟೀ ಸವಾಲು: **2**ನೇ ಆರೋಪಿ ಪರ ಶ್ರೀ.ಎಸ್ ಬಿ ಎ ವಕೀಲರಿಂದ:-

(ಸದರಿ ವಕೀಲರು 1ನೇ ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವುದಾಗಿ ಹೇಳುತ್ತಾರೆ)

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಅದೆ.

RAJASHEKHAR Digitally signed by RAJASHEKHAR Date: 2025.09.09 18:22:53 +0530

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಮ್.ಎಫ್.ಸಿ. ಜಮಖಂಡಿ.